17,000-00ಗಳನ್ನು ಬಿಡುಗಡೆ ಮಾಡಿದ್ದಾರೆಂದು ತಿಳಿಸಿ ಜಿಲ್ಲಾ ಪರಿಷತ್ತಿನಿಂದ ಸ್ಪಷ್ಟ ಮಾಹಿತಿಯನ್ನು ತರಿಸಿ ಒದಗಿಸಲಾಗುವುದು. ಆದರೂ ಜಿಲ್ಲಾ ಪರಿಷತ್ತಿಗೆ ಕಾಮಗಾರಿಯನ್ನು ಈ ತಕ್ಷಣವೇ ತೆಗೆದುಕೊಳ್ಳಲು ಕೋರಲಾಗುವುದು.

ಕಳ್ಳಂಬೆಳ್ಳದ ಮರಡಿ ರಂಗನಾಥ ಪ್ರೌಢಶಾಲೆಯ ಸಹಶಿಕ್ಷಕರಿಗೆ ಸೌಲಭ್ಯ ನೀಡುವ ಬಗ್ಗೆ

ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ):- ಸನ್ಮಾನ್ಯ ಅಧ್ಯಕ್ಷರೇ, ಶ್ರೀ ಎಸ್.ಅಪ್ಪಣ ಸಹಶಿಕ್ಷಕರು ಮರುಡಿ ರಂಗನಾಥ ಪ್ರೌಢಶಾಲೆ ಕಳ್ಳಂಬೆಳ್ಳ, ರಾ.ಹೆ.4, ಶಿರಾ ತಾಲ್ಲೂಕು ಇವರನ್ನು ಸಹಶಿಕ್ಷಕರಾಗಿ ಮುಂದುವರೆಸಿ ಎಲ್ಲಾ ಸೌಲಭ್ಯಗಳನ್ನು ಒದಗಿಸಿ, ಹುದ್ದೆಗೆ ಸಂಬಂಧಪಟ್ಟಂತೆ ಆನುಮೋದನೆಯನ್ನು ನೀಡುವಂತೆ ಕರ್ನಾಟಕ ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಾಮೂರ್ತಿಯವರನ್ನೊಗೊಂಡ ವಿಭಾಗೀಯ ಪೀಠವು ದಿನಾಂಕ:23.1.96 ರಂದು ದಿ.ಪಿ.ನಂ.:1342:92ರಲ್ಲಿ ಆದೇಶವನ್ನು ನೀಡಿರುತ್ತದೆ ಮತ್ತು ದಿನಾಂಕ 1:2:1996ರಿಂದ ಆನುಮೋದನೆಯನ್ನು ನೀಡಿ ಎಲ್ಲಾ ಸೌಲಭ್ಯಗಳನ್ನು ಒದಗಿಸುವಂತೆ ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ತುಮಕೂರು ರವರಿಗೆ ಮತ್ತು ಆಡಳಿತ ಮಂಡಲಿಯವರಿಗೆ ಆದೇಶವನ್ನು ನೀಡಿದ್ದರು ಸಹ ಇಲ್ಲಿಯತನಕ ಯಾವುದೇ ಸೌಲಭ್ಯಗಳನ್ನು ನೀಡದೆ, ಅದರ ಆನುಮೋದನೆಯನ್ನು ಸಹ ನೀಡದೆ ಉಪನಿರ್ದೇಶಕರು ದುರುದ್ದೇಶದಿಂದ ಕೂಡಿದ್ದು ನ್ಯಾಯಾಲಯ ಆಜ್ಞೆಯನ್ನು ಉಲ್ಲಂಘಿಸಿ ಮಾಡಿ ತೊಂದರೆಯನ್ನು ಮಾಡುತ್ತಿರುವುದರ ಬಗ್ಗೆ ಗಮನವನ್ನು ಸೆಳೆಯಲು ಇಚ್ಚಿಸುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಸಚಿವರು):- ಮಾನ್ಯ ಅಧ್ಯಕ್ಷರೆ, (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರ ಪರವಾಗಿ):-

ಶ್ರೀ ಅಪ್ಪಣ್ಣ, ಸಹ ಶಿಕ್ಷಕರು, ಮರಡಿ ರಂಗನಾಥ ಪ್ರೌಢಶಾಲೆ, ಕಳ್ಳಂಬೆಳ್ಳ, ಶಿರಾ ತಲ್ಲೂಕು ಇವರನ್ನು ಆಡಳಿತ ಮಂಡಳಿಯು ದಿನಾಂಕ 20-7-87 ರಲ್ಲಿ ನೇಮಕ ಮಾಡಿಕೊಂಡಿದ್ದು, ನೇಮಕಾತಿ ದಿನಾಂಕದಂದು ಅವರು ನಿಗಧಿತ ವಿದ್ಯಾರ್ಹತೆಯಾದ ಬಿ.ಇಡ್., ಹೊಂದಿರುವುದಿಲ್ಲ. ಆದ್ದುರಿಂದ ಅವರ ನೇಮಕಾತಿಯನ್ನು ಅನುಮೋದಿಸಿಲ್ಲ. ಇದರ ವಿರುದ್ಧ ಅವರು ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದು, ನ್ಯಾಯಾಲಯವು ಇವರ ನೇಮಕಾತಿಯನ್ನು ದಿನಾಂಕ 1-2-96 ರಂದು ಅನುಮೋದಿಸುವಂತೆ ನಿರ್ದೇಶನ ನೀಡಿದೆ. ಈ ರೀತಿ 1-2-96 ರಿಂದ ಸದರಿ ಶಿಕ್ಷಕರನ್ನು ಅನುಮೋದಿಸಬೇಕಾದಲ್ಲಿ ಮೀಸಲಾತಿ ಉಲ್ಲಂಘಿನೆಯಾಗುವುದರಿಂದ ಅನುಮೋದಿಸಿಲ್ಲ. ಈ ಬಗ್ಗೆ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಮಲಪ್ರಭಾ ನದಿಗೆ ಕಟ್ಟಲಾಗಿರುವ ನವಿಲೂ ತೀರ್ಥ ಜಲಾಶಯಕ್ಕೆ 9 ಟಿ.ಎಂ.ಸಿ. ನೀರನ್ನು ಸದುಪಯೋಗ ಪಡಿಸಲು ಇರತಕ್ಕ ತೊಂದರೆಯ ಬಗ್ಗೆ

ಶ್ರೀ ಶ್ರೀಶೈಲಪ್ಪ ಬಿದನೂರು (ಕೋಣ):- ಮಾನ್ಯ ಅಧ್ಯಕ್ಷರೆ, ಮಹಾದಾಯಿ ನದಿಯನ್ನು ಮಲಪ್ರಭಾ ನದಿಗೆ ಜೋಡಿಸುವುದರಿಂದ ಮಲಪ್ರಭಾ ನದಿಗೆ ಕಟ್ಟಲಾಗಿರುವ ನವಿಲು ತೀರ್ಥ ಜಲಾಶಯಕ್ಕೆ ಕಡಿಮೆಯಾಗಿರುವು 9 ಟಿ.ಎಂಸಿ. ನೀರನ್ನು ಸದುಪಯೋಗ ಪಡಿಸಲು ಇರತಕ್ಕ ತೊಂದರೆ ಏನು ಈ ತೊಂದರೆಗಳನ್ನು ಪರಿಹರಿಸಲು ಕೈಗೊಳ್ಳುವ ಕ್ರಮಗಳೇನು ? ಈ ಯೋಜನೆಗಾಗಿ ಈ ವರ್ಷ ಖರ್ಚು ಮಾಡುವ ಹಣವೆಷ್ಟು ?

ಶ್ರೀ ಕೆ.ಎನ್.ನಾಗೇಗೌಡ (ಬೃಹತ್ ನೀರಾವರಿ ಸಚಿವರು):- ಅಧ್ಯಕ್ಷರೇ, ಮಹದಾಯಿ ನದಿ ನೀರನ್ನು ಮಲಪ್ರಭಾ ಜಲಾಶಯಕ್ಕೆ ಹಾಯಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಈ ಯೋಜನೆಯು ಕೆಳಗೆ ಸೂಚಿಸಿರುವಂತೆ ಒಟ್ಟು 9 ಟಿ.ಎಂ.ಸಿ. ಪ್ರಮಾಣದ ನೀರನ್ನು ಮಲಪ್ರಭಾ ಜಲಾಶಯಕ್ಕೆ ಹಾಯಿಸುವ ಉದ್ದೇಶ ಹೊಂದಿದೆ.

ಕರ್ನಾಟಕ ವಿದ್ಯುತ್ ನಿಗಮವು ಮಹದಾಯಿ ನದಿಗೆ ಅಡ್ಡಲಾಗಿ ಖಾನಾಪುರ ತಾಲ್ಲೂಕಿನ ಕೋಟ್ನಿ ಬಳಿ ಉದ್ದೇಶಿಸಿರುವ ಜಲಾಶಯದಿಂದ 4 ಟಿ.ಎಂ.ಸಿ.

ಖಾನಾಪುರ ತಾಲ್ಲೂಕಿನಲ್ಲಿ ಪಶ್ಚಿಮಮುಖಿ ನದಿಗಳಾದ ಕಳಸ, ಹಳತಾರ ಮತ್ತು ಪೋರ್ಲಿ ನದಿಗಳಿಗೆ ಅಡ್ಡಲಾಗಿ ಉದ್ದೇಶಿಸಿರುವ ಜಲಾಶಯಗಳಿಂದ 5 ಟಿ.ಎಂ.ಸಿ.

1996-97 ನೇ ಸಾಲಿನ ದರಗಳ ಪ್ರಕಾರ ಈ ಯೋಜನೆಗೆ ತಗಲುವ ವೆಚ್ಚವನ್ನು 181 ಕೋಟಿ ರೂ.ಗಳೆಂದು ಅಂದಾಜು ಮಾಡಲಾಗಿದೆ.

ಮಹದಾಯಿ ನದಿಯು ಕರ್ನಾಟಕ ಮತ್ತು ಗೋವಾ ರಾಜ್ಯಗಳಿಗೆ ಸೇರಿರುವ ಅಂತರರಾಜ್ಯ ನದಿ ಆಗಿರುವುದರಿಂದ, ಗೋವಾ ಸರ್ಕಾರದ ಸಹಮತಿ ದೊರೆತ ನಂತರವೇ ಈ ಯೋಜನೆಯ ಕೆಲಸವನ್ನು ಪ್ರಾರಂಭಿಸಬಹುದಾಗಿದೆ.

ಆಗಸ್ಟ್ 1994 ರಲ್ಲಿ ಈ ಯೋಜನೆಯ ಬಗ್ಗೆ ಕರ್ನಾಟಕ ಮತ್ತು ಗೋವಾ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ನಡೆದ್ದಿದ್ದು ಈ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದಂತೆ ಈ ಯೋಜನೆಯಿಂದ ಪರಿಸರದ ಮೇಲೆ ಆಗುವ ಪರಿಣಾಮದ ಬಗ್ಗೆ ಅಧ್ಯಯನ ನಡೆಸುತ್ತಿದ್ದು ಒಂದು ಪ್ರಾಥಮಿಕ ವರದಿಯನ್ನು ಇತ್ತೀಚೆಗೆ ಕರ್ನಾಟಕ ವಿದ್ಯುತ್ ನಿಗಮಕ್ಕೆ ನೀಡಿದೆ. ಅಂತಿಮ ವರದಿ ಸಲ್ಲಿಸಲು ಈ ಸಂಸ್ಥೆಗಳಿಗೆ 14 ತಿಂಗಳ ಅವಧಿ ಕೊಡಲಾಗಿದೆ.

ಅಂತಿಮ ವರದಿ ಸ್ವೀಕೃತವಾದ ನಂತರ ಗೋವಾ ಸರ್ಕಾರದ ಸಹಮತಿ ಪಡೆದು ಈ ಯೋಜನೆಗಳ ಕೆಲಸಗಳನ್ನು ಪ್ರಾರಂಭಿಸಲಾಗುವುದು.

ಈ ಯೋಜನೆಯ ಪೂರಕ ಕಾಮಗಾರಿಗಳಾದ ಕಛೇರಿ ಕಟ್ಟಡ, ವಸತಿ ಗೃಹ ಕೊಡು ರಸ್ತೆ ಹಾಗೂ ಆನ್ವೇಷಣೆಗೆ ಬೇಕಾದ ಕಾಮಗಾರಿಗಳನ್ನು ಕೈಗೊತ್ತಿಕೊಳ್ಳಲಾಗಿದ್ದು, ಮಾರ್ಚ್ 96ರವರೆಗೆ ಒಟ್ಟು 80.88 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ. 1996-97 ನೇ ಸಾಲಿನಲ್ಲಿ ಈ ಯೋಜನೆಗೆ ರೂ. 50 ಲಕ್ಷ ಅನುದಾನ ಒದಗಿಸಲಾಗಿದೆ.

ಉಡುಪಿ ತಾಲ್ಲೂಕು ಕಛೇರಿಯಲ್ಲಿ ವಿಧವಾ ಹಾಗೂ ವೃದ್ಧಾಪ್ಯ ವೇತನ ವಿಳಂಬ

ಶ್ರೀ ಯು.ಆರ್.ಸಭಾಪತಿ (ಉಡುಪಿ):- ಸನ್ಮಾನ್ಯ ಅಧ್ಯಕ್ಷರೇ, ಉಡುಪಿ ತಾಲ್ಲೂಕು ಕಛೇರಿಯಲ್ಲಿ 1995-96 ರ ಸಾಲಿನಲ್ಲಿ ಎಷ್ಟು ಜನರಿಗೆ ಆಥವಾ ಹಾಗೂ ವೃದ್ಧಾಪ್ಯ ವೇತನ ಕೊಡಲು ಬಾಕಿ ಇದೆ ? ವಿಧವಾ ಹಾಗೂ ವೃದ್ಧಾಪ್ಯ ವೇತನ ನೀಡುವಲ್ಲಿ ಅನಾವಶ್ಯಕ ವಿಳಂಬವಾಗಿರುವುದಕ್ಕೆ ಕಾರಣಗಳೇನು ? ಅನೇಕ ಮಂದಿಗೆ ವೃದ್ಧಾಪ್ಯ ಹಾಗೂ ವಿಧವಾ ವೇತನಗಳು ಅನೇಕ ತಿಂಗಳುಗಳಿಂದ ಬಾಕಿ ಇರುವುದನ್ನು ನನ್ನ ಗಮನಕ್ಕೆ ಬಂದಿದ್ದು ಈ ವೇತನಗಳ ಪಾವತಿಯನ್ನು ಕ್ರಮಬದ್ಧವಾಗಿ ಮಾಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು ? ಈ ಬಗ್ಗೆ ಉಡುಪಿ ತಾಲ್ಲೂಕು ಕಛೇರಿಯ ಸಿಬ್ಬಂದಿ ವ್ಯವಸ್ಥೆಯಲ್ಲೇನಾದರೂ ನಿರ್ಲಕ್ಷ್ಯತನ ಕಂಡು ಬಂದಿರುವುದು ಸಹಜವೇ ?